# ಭರತನೃತ್ಯದಲ್ಲಿ ದಿರಿಸಿನ ಚಮತ್ಕಾರ!

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಸಾಂಪ್ರದಾಯಿಕ ನೃತ್ಯಗಳಿಗೂ ಇದೀಗ ಫ್ಯಾಷನ್ ಎಡತಾಕಿದೆ. ಭರತನಾಟ್ಯದ ದಿರಿಸು ಈಗ ಫ್ಯಾಷನ್ ಟ್ರೆಂಡ್ ಆಗಿದ್ದು, ಪರಂಪರೆ–ಆಧುನಿಕತೆ ಬೆಸೆದುಕೊಂಡು ಹೊಸ ಬಗೆಯ ಫ್ಯಾಷನ್‌ಲೋಕ ಸೃಷ್ಟಿಯಾಗಿದೆ.



ಫ್ಯಾಷನ್ ಜಗತ್ತು ಸಾಂಪ್ರದಾಯಿಕತೆಯನ್ನೂ ಮೀರಿದೆ. ಕೆಲವೊಮ್ಮೆ ಸಂಪ್ರದಾಯಕ್ಕೆ ಕೊಂಚವೂ ಧಕ್ಕೆಯಾಗದಂತೆ ಆಧುನಿಕ ಜಗತ್ತಿಗೆ ತೆರೆದುಕೊಂಡಿದೆ. ಇದರಲ್ಲಿ ಸಾಂಪ್ರದಾಯಿಕ ನೃತ್ಯದ ಉಡುಪು, ಕಾಸ್ಟ್ಯೂಮ್‌ಗಳೂ ಹೊರತಾಗಿಲ್ಲ.

ಭರತನಾಟ್ಯ ಯಾಕೆ ಇದಕ್ಕೆ ಇಷ್ಟು ಪ್ರಾಶಸ್ತ್ಯ. ಯಾವುದೇ ಶಾಸ್ತ್ರೀಯ ಕಲೆಯನ್ನು ಶಾಸ್ತ್ರಬದ್ಧವಾಗಿ ಮಾಡಿದರೆ ಅದು ಚೆನ್ನ, ಅಲ್ಲದೆ ಆ ಕಲೆಗೆ ನಾವು ಗೌರವ ಕೊಟ್ಟಂತೆ. ನಾಟ್ಯ ಮಾಡುವವರು ಅವರ ಆಭರಣ, ಕೇಶ ಶೃಂಗಾರ, ವಸ್ತ್ರ ವಿನ್ಯಾಸ, ಮನೋಹರ ಗೆಜ್ಜೆ ಶಬ್ಧ ನವರಸಗಳನ್ನು ಸರಿಯಾದ ಕ್ರಮದಲ್ಲಿ ಅಳವಡಿಸಿ ನರ್ತಿಸಿದಾಗ ಇನ್ನೂ ನೋಡಬೇಕು, ಆನಂದಿಸಬೇಕು ಎಂಬ ಹಂಬಲ ಉಂಟಾಗುತ್ತದೆ. ಭಾರತದ ಪ್ರತಿಯೊಂದು ಶಾಸ್ತ್ರೀಯ ನೃತ್ಯಗಳು ಗುರುತಿಸಲ್ಪಡುವುದು ಅವುಗಳ ವಿಶಿಷ್ಟ ಆಹಾರ್ಯ (ವೇಷಭೂಷಣ)ದಿಂದ.

ಪ್ರತಿಯೊಂದು ನೃತ್ಯ ಪ್ರಕಾರಗಳಿಗೆ ನಿರ್ದಿಷ್ಟವಾದ ಚಲನೆಗಳಿದ್ದು ಅದಕ್ಕೆ ಅನುಗುಣವಾಗಿ ಆಹಾರ್ಯವನ್ನು ಬಳಸಲಾಗುತ್ತದೆ. ಉದಾ: ಮೋಹಿನಿ ಆಟ್ಟಂನಲ್ಲಿ ಸುಕುಮಾರವಾದ ಚಲನೆ ಇರುವುದರಿಂದ ಅವರ ದಿರಿಸಿನಲ್ಲಿ ತುಂಬ ನೆರಿಗೆಗಳಿದ್ದರೂ ನೃತ್ಯ ಪ್ರಕಾರದ ಮಂಡಲ ಭೇದಗಳು ಪರಿಣಾಮಕಾರಿಯಾಗಿ ಗೋಚರವಾಗುತ್ತದೆ. ಕಥಕ್‌ನಲ್ಲಿ ಹೆಚ್ಚು ಸಮಪಾದ ಭಂಗಿಗಳು ಇರುವುದರಿಂದ ಅವರ ದಿರಿಸಿನಲ್ಲಿ ನೆರಿಗೆಗಳು ಬಹಳ ಕನಿಷ್ಠವಾಗಿ ಇರುತ್ತದೆ. ಹಾಗೆಯೇ ಭರತನಾಟ್ಯದಲ್ಲಿ ಎಲ್ಲಾ ರೀತಿಯ ಮಂಡಲಗಳು ಭಂಗಿಯ ಪ್ರಭೇದಗಳು ಹಾಗೂ ಗರಿಷ್ಠ ವಿನ್ಯಾಸದ ಚಾರಿಗಳು ಇರುವ ಕಾರಣ ಚಲ್ಲಣದೊಂದಿಗೆ ನೆರಿಗೆಗಳು ವಿವಿಧ ವಿನ್ಯಾಸಗಳನ್ನು ಅಳವಡಿಸಿದ ದಿರಿಸನ್ನು ಬಳಸುತ್ತಾರೆ. ಭರತನಾಟ್ಯದಲ್ಲಿ ಹಿಂದೆ ಒಂಭತ್ತು ಗಜದ ಸೀರೆಯಿಂದ ಕಚ್ಚೆಯನ್ನು ಕಟ್ಟಿ ನರ್ತಿಸುತ್ತಿದ್ದರು. ಇಂದಿನ ಫ್ಯಾಷನ್ ಯುಗದಲ್ಲಿ ಇದರಲ್ಲೂ ಹಲವು ತರದ ವಿನ್ಯಾಸಗಳು ಕಂಡು ಬರುತ್ತಿದೆ. ಸ್ತ್ರೀಯರ ವಸ್ತ್ರ ವಿನ್ಯಾಸ, ಪುರುಷರ ವಿನ್ಯಾಸ ಎಂಬ 2 ವಿಭಾಗಗಳಿವೆ. ಇಬ್ಬರಲ್ಲೂ ಸುಮಾರು ವಿನ್ಯಾಸಗಳು ಒಂದೇ ಇರುತ್ತವೆ. ವಿಭಿನ್ನವಾದವು ಇವೆ. ವಸ್ತ್ರವಿನ್ಯಾಸದಲ್ಲಿ ನೆರಿಗೆ ತುಂಬಾ ಪ್ರಾಮುಖ್ಯವಾದವು ಇದರಲ್ಲಿ 2 ವಿಧ.

**ಸಣ್ಣ ನೆರಿಗೆ:** ಸಣ್ಣ ನೆರಿಗೆಯಲ್ಲಿ ನಕ್ಷತ್ರ (ಡೈಮಂಡ್) ನೆರಿಗೆ, ವೃತ್ತ (ರೌಂಡ್) ನೆರಿಗೆ, ಓರೆ (ಕ್ರಾಸ್) ನೆರಿಗೆ ಹೀಗೆ ಮೂರು ವಿಭಾಗಗಳಿವೆ.

**ನಕ್ಷತ್ರ (ಡೈಮಂಡ್) ನೆರಿಗೆ:** ಸೊಂಟದ ಕೆಳಗಡೆ ಬರುವ ನೆರಿಗೆ ನೋಡಲು ಡೈಮಂಡ್ ಆಕಾರದಲ್ಲಿ ಕಾಣುತ್ತದೆ.

**ವೃತ್ತ (ರೌಂಡ್) ನೆರಿಗೆ:** ಇದರಲ್ಲಿ ವೃತ್ತವಾಗಿ ನೆರಿಗೆಗಳು ಬೀಸಣಿಗೆಯಂತೆ ಕಾಣುತ್ತದೆ. ಬಳಕೆಯಲ್ಲಿ ಸಣ್ಣ ಫ್ಯಾನ್ ಎಂದೇ ಕರೆಯುತ್ತಾರೆ.

**ಓರೆ (ಕ್ರಾಸ್) ನೆರಿಗೆ:** ಒಂದು ಬದಿ ವೃತ್ತವಾಗಿದ್ದು ಇನ್ನೊಂದು ಬದಿ ಓರೆಯಾಗಿ ಗೆರೆ ಹಾಕಿದಂತೆ ಇರುತ್ತದೆ. ಇನ್ನೂ ವಿವಿಧ ರೀತಿಯಲ್ಲಿ ಅವರವರ ಭಾವಕ್ಕೆ ತಕ್ಕಂತೆ ಅಳವಡಿಸಿಕೊಳ್ಳುತ್ತಾರೆ.

**ದೊಡ್ಡ ನೆರಿಗೆ:** ಇದರಲ್ಲಿ ಒಂದು ಉದ್ದದ ದೊಡ್ಡ ನೆರಿಗೆ ಸೊಂಟದಿಂದ ಮೊಣಕಾಲವರೆಗೆ, ಮೆಟ್ಟಿಲುಗಳಾಗಿ 2, 3 ದೊಡ್ಡದಾದ ಉದ್ದದ ನೆರಿಗೆಗಳು ಅಳವಡಿಸುವುದು ವಾಡಿಕೆಯಲ್ಲಿದೆ.

**ಚಲ್ಲಣದ (ಪ್ಯಾಂಟ್) ವಿನ್ಯಾಸಗಳು**